ಸಾಕ್ಷಿಯನ್ನು ದಿಃ **18.02.2025.** ರಂದು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**<u>ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಬಿ ಆರ್ ಎಲ್ ವಕೀಲರಿಂದಃ</u>–**

ನಾನು ಈ ದಾವೆಯಲ್ಲಿ ವಾದಿ ಬ್ಯಾಂಕಿನ ಮ್ಯಾನೇಜರ್ ಆಗಿದ್ದು ನನ್ನ ಮುಖ್ಯ ವಿಚಾರಣೆಯ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದೇನೆ. ಅದರಲ್ಲಿ ಬರೆದಿರುವ ವಿಷಯಗಳು ನನಗೆ ತಿಳಿದಿದೆ ಮತ್ತು ಸತ್ಯವಾಗಿದೆ.

ಪ್ರತಿವಾದಿಯರು ಸಾಲ ಕೋರಿ ಸಲ್ಲಿಸಿದ ಅರ್ಜಿಯನ್ನು ನಿಪಿ 1 ಎಂದು, ಸಾಲ ಮಂಜೂರು ಮಾಡಿದ ಬಗ್ಗೆ ಮಂಜೂರಾತಿ ಪತ್ರದ ಬಗ್ಗೆ ನಿಪಿ 2 ಎಂದು, ದಿನಾಂಕ 28.06.2016 ರ ನೋಂದಾಯಿತ Mortgage deed ನ್ನು ನಿಪಿ 3 ಎಂದು, Certificate of loan papers obtained ದಾಖಲೆಯನ್ನು ನಿಪಿ 4 ಎಂದು, ಸಾಲದ ಕರಾರನ್ನು ನಿಪಿ 5 ಎಂದು, Letter of guarantee ನ್ನು ನಿಪಿ 6 ಎಂದು, Acknowledgment of debt ನಿಪಿ 7 ಎಂದು, Letter of acknowledgment of debt ನಿಪಿ 8 ಎಂದು, ಸದರಿ ಸಾಲದ ಖಾತೆಗೆ ಸಂಬಂಧಿಸಿದಂತೆ ಎರಡು account statement ಗಳನ್ನು ನಿಪಿ 9 ಮತ್ತು 10 ಎಂದು, Upgrade information of NPA account ನ್ನು ನಿಪಿ 11 ಎಂದು, ಪ್ರತಿವಾದಿಯರ ಕುಟುಂಬಕ್ಕೆ ಸಂಬಂಧಿಸಿದ ವಂಶವೃಕ್ಷದ ಪ್ರಮಾಣ ಪತ್ರವನ್ನು ನಿಪಿ 12 ಎಂದು, ಮೂರು ಇಸಿಗಳನ್ನು ನಿಪಿ 13 ರಿಂದ 15 ಎಂದು, ಎರಡು ಚೆಕ್ಕುಬಂದಿ ದೃಢೀಕರಣಗಳನ್ನು ನಿಪಿ 16 ಮತ್ತು 17 ಎಂದು, ಎರಡು ಕಂದಾಯ ಪಾವತಿ ರಶೀದಿಗಳನ್ನು ನಿಪಿ 18 ಮತ್ತು 19 ಎಂದು, ತಂಬಾಕು ಮಂಡಳಿಯಿಂದ ನೀಡಿದ ರಶೀದಿಯನ್ನು ನಿಪಿ 20 ಎಂದು, ಎರಡು ಒಟ್ಟು ಹಿಡುವಳಿ ದೃಢೀಕರಣ ಪತ್ರಗಳನ್ನು ನಿಪಿ 21 ಮತ್ತು 22 ಎಂದು, ಉಪನೋಂದಣಾಧಿಕಾರಿಗಳು ನೀಡಿದ ಮಾರ್ಗಸೂಚಿ ಬೆಲೆಯ ಪತ್ರವನ್ನು ನಿಪಿ 23 ಎಂದು, ಎಂ ಆರ್ ನಂಬರ್ 54/2008–09 ನ್ನು ನಿಪಿ 24 ಎಂದು,

ಎಂ ಆರ್ ನಂಬರ್ 38/2004–05 ನ್ನು ನಿಪಿ 25 ಎಂದು, ದಿನಾಂಕ 29.06.2016 ರ ಇನ್ನೊಂದು ಸಾಲದ ಅರ್ಜಿಯನ್ನು ನಿಪಿ 26 ಎಂದು, ಅದನ್ನು ಮಂಜೂರು ಮಾಡಿದ ಬಗ್ಗೆ ಮಂಜೂರಾತಿ ಪತ್ರವನ್ನು ನಿಪಿ 27 ಎಂದು, Certificate of loan papers obtained ನ್ನು ನಿಪಿ 28 ಎಂದು, ನಮ್ಮ ಬ್ಯಾಂಕಿನಿಂದ ಪ್ರತಿವಾದಿಯರಿಗೆ ನೀಡಿದ memorandum ನ್ನು ನಿಪಿ 29 ಎಂದು, ಸಾಲದ ಕರಾರನ್ನು ನಿಪಿ 30 ಎಂದು, Letter of guarantee ನ್ನು ನಿಪಿ 31 ಎಂದು, Undertaking memo ನ್ನು ನಿಪಿ 32 ಎಂದು, Letter of repayment ನ್ನು ನಿಪಿ 33 ಎಂದು, ಡಿಪಿ ನೋಟ್ ನ್ನು ನಿಪಿ 34 ಎಂದು, Acknowledgment of liability ನ್ನು ನಿಪಿ 35 ಎಂದು, ಎರಡು Letter of acknowledgment of debt ನ್ನು ನಿಪಿ 36 ಮತ್ತು 37 ಎಂದು, Periodic asset verification report ನ್ನು ನಿಪಿ 38 ಎಂದು, ಸಾಲದ ಖಾತೆಗೆ ಸಂಬಂಧಿಸಿದಂತೆ ಎರಡು account statement ಗಳನ್ನು ನಿಪಿ 39 ಮತ್ತು 40 ಎಂದು, upgrade information of NPA account ನ್ನು ನಿಪಿ 41 ಎಂದು, ಸಿವಿಲ್ ಇಂಜಿನಿಯರ್ ರವರು ನೀಡಿದ ಎಸ್ಟಿಮೇಷನ್ ನ್ನು ಪ್ಲಾನ್ ನೊಂದಿಗೆ ನಿಪಿ 42 ಎಂದು, ನಮ್ಮ ವಕೀಲರ ಮೂಲಕ ನೀಡಿದ ನೋಟೀಸಿನ ಪ್ರತಿಯನ್ನು ನಿಪಿ 43 ಎಂದು, ಅದನ್ನು ಕಳುಹಿಸಿದ ಬಗ್ಗೆ 6 ಅಂಚೆ ರಶೀದಿಗಳನ್ನು ನಿಪಿ 44 ರಿಂದ 49 ಎಂದು, 5 ಅಂಚೆ ಸ್ವೀಕೃತಿ ಪತ್ರಗಳನ್ನು ನಿಪಿ 50 ರಿಂದ 54 ಎಂದು, ಒಂದು ವಾಪಸ್ಸಾದ ಅಂಚೆ ಕವರ್ ನ್ನು ನಿಪಿ 55 ಎಂದು ಗುರುತಿಸಲಾಯಿತು. ಅದನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ಅದರೊಳಗಿರುವ ನೋಟೀಸ್ ನ್ನು ನಿಪಿ 55(ಎ) ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ನೀಡಿಲಾಗಿದೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.